ಅಕಟ - ವಿಕಟ



ಡ್ರಗ್ಸ್, ಸೆಕ್ಸ್ ಮತ್ತು ಅನಿಯಂತ್ರಿತ ಮೋಜಿನ ಕತ್ತಲ ಲೋಕ!

ಪ್ರಚಲಿತ

ವಿಜಯ್ ದರ್ಡಾ

ಹಿರಿಯ ಪತ್ರಕರ್ತ
ಅಧ್ಯಕ್ಷರು ಲೋಕಮತ್ ಮೀಡಿಯಾ

vveditoped@gmail.com

ಹಣದ ಲಾಲಸೆಯು ಸಾವಿನ ವ್ಯಾಪಾರಿಗಳನ್ನು ಎಷ್ಟು ಅಧಃಪತನಗೊಳಿಸಿದೆ ಅಂದರೆ ಅವರು ಡ್ರಗ್ಸ್ ವ್ಯಾಪಾರದಲ್ಲಿ ತೊಡಗಿಕೊಳ್ಳುವ ಮೂಲಕ ದೇಶದ ಯುವಜನರನ್ನೇ ನಾಶಪಡಿಸುತ್ತಿದ್ದಾರೆ. ಡ್ರಗ್ಸ್‌ನ ಹಣದಿಂದ ಬೆಳೆಯುತ್ತಿರುವ ಭಯೋತ್ಪಾದನೆಯ ಸಂಪರ್ಕ ಜಾಲವನ್ನು ಬಲಪಡಿಸಿ ದೇಶವನ್ನೂ ನಾಶಪಡಿಸುತ್ತಿದ್ದಾರೆ. ಒಟ್ಟಿನಲ್ಲಿ ಮಾನವ ಕುಲವನ್ನೇ ಅವರು ಸಾವಿನ ಕೂಪಕ್ಕೆ ತಳ್ಳುತ್ತಿದ್ದಾರೆ. ನಾವು ಮೂಕಪ್ರೇಕ್ಷಕರಾಗಿದ್ದೇವೆ. ಇಂತಹ ವಿಷಣ್ಣ ಪರಿಸ್ಥಿತಿಯಲ್ಲೂ ಒಂದು ಭರವಸೆಯ ಆಶಾಕಿರಣ ಹುಟ್ಟಿದೆ...

ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್ ಅವರ ಮಗ ಆರ್ಯನ್ ಖಾನ್‌ನನ್ನು ಮಾದಕ ವಸ್ತು ನಿಯಂತ್ರಣ ದಳ (ಎನ್‌ಸಿಬಿ)ದ ಅಧಿಕಾರಿಗಳು ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಿದ ವಿಷಯವೀಗ ಬಿಸಿಬಿಸಿ ಚರ್ಚೆಯಾಗುತ್ತಿದೆ. ಕಾರ್ಡೇಲಿಯಾ ಕ್ರೂಸ್ ಹಡಗಿನಲ್ಲಿ ರೇವ್ ಪಾರ್ಟಿ ಮಾಡುತ್ತಿದ್ದಾಗ ಆತನನ್ನು ಎನ್‌ಸಿಬಿ ಬಂಧಿಸಿತ್ತು. ಅದರಲ್ಲೇನೂ ವಿಶೇಷವಿಲ್ಲ. ಆದರೆ, ಇದು ಕೇವಲ ರೇವ್ ಪಾರ್ಟಿ ಮತ್ತು ಹೈ ಪ್ರೊಫೈಲ್ ಯುವಕನೊಬ್ಬನ ಬಂಧನಕ್ಕೆ ಸಂಬಂಧಿಸಿದ ವಿಷಯವಷ್ಟೇ ಅಲ್ಲ. ಸೂಕ್ಷ್ಮವಾಗಿ ನೋಡಿದರೆ ಇದು ಪಾಶ್ಚಾತ್ಯರ ಜೀವನಶೈಲಿಯು ಹೇಗೆ ನಮ್ಮ ಯುವಕರನ್ನು ಡ್ರಗ್ಸ್, ಸೆಕ್ಸ್ ಮತ್ತು ವ್ಯಭಿಚಾರದ ಕತ್ತಲ ಲೋಕಕ್ಕೆ ಕರೆದೊಯ್ಯುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿದೆ. ಈ ಡ್ರಗ್ಸ್‌ಗಳು ನಿಜಕ್ಕೂ ಹುಡುಗರನ್ನು ಕೆಡಿಸುತ್ತಿವೆ.

ಖಾಸಗಿ ಹಡಗಿನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿಯಲ್ಲಿ ಯಾವ್ಯಾವ ಸೆಲೆಬ್ರಿಟಿಗಳ ಮಕ್ಕಳಿದ್ದರು ಎಂಬುದು ಎನ್‌ಸಿಬಿ ಅಧಿಕಾರಿಗಳಿಗೆ ದಾಳಿಗೂ ಮುನ್ನ ಗೊತ್ತಿರಲಿಲ್ಲ. ಅವರಿಗೆ, ಕಾರ್ಡೇಲಿಯಾ ಹಡಗಿನಲ್ಲಿ ಹೀಗೊಂದು ರೇವ್ ಪಾರ್ಟಿ ನಡೆಯುತ್ತಿದೆ, ಅದನ್ನು ಫ್ಯಾಷನ್ ಟೀವಿಯ ಮ್ಯಾನೇಜಿಂಗ್ ಡೈರೆಕ್ಟರ್ ಕಾಶಿಫ್ ಖಾನ್ ಆಯೋಜಿಸಿದ್ದಾನೆ ಎಂಬ ಖಚಿತ ಮಾಹಿತಿಯಷ್ಟೇ ಬಂದಿತ್ತು. ಆದರೆ, ದಾಳಿ ನಡೆಸಿದಾಗ ಕಾಶಿಫ್ ಖಾನ್ ಸಿಗಲಿಲ್ಲ. ಬದಲಿಗೆ ಆರ್ಯನ್ ಖಾನ್ ಸಿಕ್ಕಿಬಿದ್ದ. ರೇವ್ ಪಾರ್ಟಿಗಳ ಬಗ್ಗೆ ಎನ್‌ಸಿಬಿ ಅಧಿಕಾರಿಗಳಿಂದ ನನಗೆ ಸಿಕ್ಕ ಮಾಹಿತಿಯನ್ನು ಕೇಳಿದರೆ ಮೈಮೇಲೆ ಗುಳ್ಳೆಗಳೇಳುತ್ತವೆ. ಅಲ್ಲಿ ಗಾಂಜಾ, ಚರಸ್, ಅಫೀಮು, ಕೊಕೇನ್ ಹಾಗೂ ಇನ್ನಿತರ ಡ್ರಗ್ಸ್‌ಗಳು ಯದ್ವಾತದ್ವಾ ಬಳಕೆಯಾಗುತ್ತವೆ. ಲೈಂಗಿಕ ಶಕ್ತಿ ವೃದ್ಧಿಸುತ್ತದೆ ಎಂದು ಹೇಳಲಾಗುವ ಎಂಡಿಎಂಎ ಕೂಡ ಬಳಕೆಯಾಗುತ್ತದೆ. ಅದರ ಶಕ್ತಿ ಎಷ್ಟಿರುತ್ತದೆಯೆಂದರೆ, ಎಂಡಿಎಂಎ ಸೇವಿಸುವ ವ್ಯಕ್ತಿ ಬೇರೆ ಬೇರೆ ಸಂಗಾತಿಗಳ ಜತೆ ಗಂಟೆಗಟ್ಟಲೆ ನಿರಂತರವಾಗಿ ಲೈಂಗಿಕ ಕ್ರಿಯೆ ನಡೆಸಬಹುದಂತೆ. ಅವನ ಜತೆ ಸೆಕ್ಸ್‌ನಲ್ಲಿ ಪಾಲ್ಗೊಳ್ಳಬೇಕಾದ ಹುಡುಗಿಯರ ಪಾಡನ್ನೊಮ್ಮೆ ಊಹಿಸಿ. ಅವರೂ ಕೂಡ ಯಾರದೋ ಮಕ್ಕಳಾಗಿರುತ್ತಾರೆ! ಮೋಜಿನ ಹೆಸರಿನಲ್ಲಿ ಡ್ರಗ್ಸ್‌ಗೆ ಬಲಿಯಾದ ಹೆಣ್ಣುಮಕ್ಕಳು ಇನ್ನಾವುದೋ ಲೈಂಗಿಕ ರಾಕ್ಷಸನಿಗೆ ಬೇಟೆಯಾಗುತ್ತಾರೆ. ಇಂತಹ ಘೋರ ಅಪರಾಧಕ್ಕೆ ಅವರೊಬ್ಬರನ್ನೇ ದೂಷಿಸಬೇಕಾ? ನನ್ನ ಪ್ರಕಾರ ಅವರ ಪೋಷಕರು ಹಾಗೂ ಕುಟುಂಬದವರನ್ನು ಹೆಚ್ಚು ದೂಷಿಸಬೇಕು. ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೆಂಬುದು ಅಪ್ಪ ಅಮ್ಮನಿಗೆ ಗೊತ್ತಿರಬೇಕು. ಬಣ್ಣದ ಜಗತ್ತಿಗೆ ಮರುಳಾಗುವ ಮಧ್ಯಮ ವರ್ಗದ ಹುಡುಗಿಯರು ಬಹಳ ಸುಲಭವಾಗಿ ಇಂತಹದ್ದಕ್ಕೆ ಬಲಿಯಾಗುತ್ತಾರೆ. ಕೊಳಕು ಶ್ರೀಮಂತಿಕೆಯಿಂದ ಹಾಳಾದ ಮೋಜುಗಾರರು ಇಂಥವರ ಜತೆ ವ್ಯಭಿಚಾರ ಮಾಡುತ್ತಾರೆ. ನೆನಪಿಡಿ, ಸಂಪತ್ತಿದೆ ಎಂದಾಕ್ಷಣ ನಿಮ್ಮ ಮಕ್ಕಳನ್ನು ಕೆಡಿಸಬೇಕು ಎಂದೇನಿಲ್ಲ!

ಈ ಲೋಕದಲ್ಲಿ ಒಂದೆಡೆ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕು ಎಂದು ಹಗಲು-ರಾತ್ರಿ ಮೈಮುರಿದು ದುಡಿಯುವ ಬಡವರಿದ್ದಾರೆ. ಎಲ್ಲೋ ಕೂಲಿ ಮಾಡಿ, ಇನ್ನೆಲ್ಲೋ ಮೂಟೆ ಹೊತ್ತು, ಯಾರದೋ ಮನೆಯಲ್ಲಿ ಪಾತ್ರೆ ತೊಳೆದು ಇವರು ಮಕ್ಕಳನ್ನು ಓದಿಸುತ್ತಾರೆ. ಇಂತಹವರ ಮನೆಯಿಂದಲೇ ಒಬ್ಬ ಎಪಿಜೆ ಅಬ್ದುಲ್ ಕಲಾಂ ಹುಟ್ಟುತ್ತಾನೆ. ಇನ್ನೊಂದೆಡೆ ತಮ್ಮ ಮಕ್ಕಳಿಗೆ ಪ್ರತಿದಿನ ಸಾವಿರಾರು ರೂಪಾಯಿ ಪಾಕೆಟ್ ಮನಿ ನೀಡುವ ಶ್ರೀಮಂತರಿದ್ದಾರೆ. ಮಕ್ಕಳಿಗೆ ಅಷ್ಟೊಂದು ಹಣ ಏಕೆ ಬೇಕೆಂದು ಒಮ್ಮೆಯಾದರೂ ಅವರು ಕೇಳುತ್ತಾರಾ? ರಾತ್ರಿ ತಡವಾಗಿ ಮನೆಗೆ ಬಂದಾಗ ಎಲ್ಲಿಗೆ ಹೋಗಿದ್ದೆ ಎಂದು ಕೇಳುತ್ತಾರಾ? ಅದರ ಪರಿಣಾಮವೇ ಇಂದು ನಮ್ಮ ಮುಂದಿರುವುದು. ಡ್ರಗ್ ಪೆಡ್ಲರ್‌ಗಳು ಇವತ್ತು ನಮ್ಮ ಸುತ್ತಮುತ್ತ ಎಲ್ಲೆಡೆ ಇದ್ದಾರೆ. ಶ್ರೀಮಂತರ ಮಕ್ಕಳಿಗೆ ಮೋಜಿನ ಲೋಕ ತೋರಿಸಲು ಇವರು ಕಾಯುತ್ತಿದ್ದಾರೆ. ಹಾಲಿವುಡ್ ಹಾಗೂ ಬಾಲಿವುಡ್ ಸ್ಟಾರ್‌ಗಳನ್ನು ಅಥವಾ ಅವರ ಮಕ್ಕಳನ್ನು ರೇವ್ ಪಾರ್ಟಿಗೆ ಕರೆಸುವುದೇ ಈ ಕಾರಣಕ್ಕೆ! ಕೆಲ ವರ್ಷಗಳ ಹಿಂದೆ ಚಿತ್ರರಂಗದ ಹಲವು ಖ್ಯಾತನಾಮ ಸೆಲೆಬ್ರಿಟಿಗಳು ಪಾಲ್ಗೊಂಡಿದ್ದ ರೇವ್ ಪಾರ್ಟಿಯ ವಿಡಿಯೋ ವೈರಲ್ ಆಗಿತ್ತು. ನಂತರ ಯಾವುದೇ ಕ್ರಮ ಕೈಗೊಂಡ ಸುದ್ದಿ ಬರಲಿಲ್ಲ. ಯಾಕೆ?

ನಾನು ಮುಂಬೈನಲ್ಲಿ ಓದುತ್ತಿದ್ದಾಗ ಅಲ್ಲಿನ ಪಾನ್ ಶಾಪ್‌ಗಳಲ್ಲಿ ಗಾಂಜಾ ಮತ್ತು ಚರಸ್‌ಗಳನ್ನು ಮುಕ್ತವಾಗಿ ಮಾರಾಟ ಮಾಡುತ್ತಿದ್ದರು. ಶಾಲೆ ಹಾಗೂ ಕಾಲೇಜುಗಳ ಸಮೀಪದಲ್ಲೇ ಈ ಅಂಗಡಿಗಳಿರುತ್ತಿದ್ದವು. ಯಾವ ಅಂಗಡಿಯ ಮುಂದೆ ಈಶ್ವರನ ಫೋಟೋ ನೇತುಹಾಕಿದ್ದಾರೋ ಅಲ್ಲಿ ಡ್ರಗ್ ಸಿಗುತ್ತದೆ ಎಂಬುದು ಮಾದಕ ವ್ಯಸನಿಗಳಿಗೆ ಗೊತ್ತಿರುತ್ತಿತ್ತು. ಇಂತಹ ಅಕ್ರಮ ದಂಧೆ ರಾಜಾರೋಷವಾಗಿ ಹಾಡಹಗಲಿನಲ್ಲೇ ನಡೆಯುತ್ತಿತ್ತು. ಯಾವ ಕಾನೂನಿಗೂ ಇವರು ಹೆದರುತ್ತಿರಲಿಲ್ಲ. ನಂತರ ಕುಡುಕ ಹಿಪ್ಪಿಗಳು ಅಮೆರಿಕ, ಯುರೋಪ್ ಹಾಗೂ ಇಂಗ್ಲೆಂಡ್‌ಗಳಿಂದ ಭಾರತಕ್ಕೆ ಬರತೊಡಗಿದರು. ಅವರು ಗೋವಾದ ಬೀಚುಗಳಲ್ಲಿ ಬಿದ್ದುಕೊಳ್ಳುತ್ತಿದ್ದರು. ಅಲ್ಲೊಂದು ಡ್ರಗ್ಸ್ ಸಂಸ್ಕೃತಿ ಬೆಳೆಯಿತು... ಡ್ರಗ್ ವ್ಯಾಪಾರವೂ ಜೋರಾಯಿತು... ಅದರ ಜತೆಗೆ ಸೆಕ್ಸ್ ದಂಧೆ ಹಾಗೂ ಅದರಂತಹ ಇನ್ನಷ್ಟು ಅನೈತಿಕ ಚಟುವಟಿಗಳೂ ಬೆಳೆದವು. ನಂತರ ಈ ದಂಧೆಯನ್ನೆಲ್ಲ ರಷ್ಯನ್ನರು ತಮ್ಮ ಕೈಗೆ ತೆಗೆದುಕೊಂಡರು. ಅದರೊಂದಿಗೆ ಡ್ರಗ್ಸ್ ವ್ಯಾಪಾರ ಇಡೀ ದೇಶಕ್ಕೆ ಹರಡತೊಡಗಿತು. ಭಾರತದಲ್ಲಿ ಮಾದಕ ವಸ್ತುಗಳ ಆರ್ಥಿಕತೆಯ ಗಾತ್ರವೆಷ್ಟು ಎಂಬುದು ಇವತ್ತಿಗೂ ಸ್ಪಷ್ಟವಾಗಿ ಗೊತ್ತಿಲ್ಲ. ಸ್ಥೂಲ ಅಂದಾಜಿನ ಪ್ರಕಾರ ವರ್ಷಕ್ಕೆ ಸುಮಾರು 1 ಲಕ್ಷ ಕೋಟಿ ರು.ನಷ್ಟು ಡ್ರಗ್ಸ್ ವ್ಯಾಪಾರ ಇಲ್ಲಿ ನಡೆಯುತ್ತದೆ. ಆದರೆ ನನಗೆ ಈ ದಂಧೆಯ ಗಾತ್ರ ಇನ್ನೂ ಹೆಚ್ಚಿರಬಹುದು ಅನ್ನಿಸುತ್ತದೆ.

ಜಗತ್ತಿನಲ್ಲಿ ಅತಿದೊಡ್ಡ ಮಾಫಿಯಾ ಅಂದರೆ ಡ್ರಗ್ ಮಾಫಿಯಾ. ಎರಡನೆಯದು ಶಸ್ತ್ರಾಸ್ತ್ರಗಳ ಮಾಫಿಯಾ. ಇವೆರಡಕ್ಕೂ ಪರಸ್ಪರ ಸಂಬಂಧವಿದೆ. ಮತ್ತು ಇವೆರಡೂ ಮಾಫಿಯಾಗಳು ಭಯೋತ್ಪಾದಕ ಸಂಘಟನೆಗಳ ಜತೆ ಶಾಮೀಲಾಗಿರುತ್ತವೆ. ಮಾದಕ ವಸ್ತುಗಳ ವ್ಯಾಪಾರದಲ್ಲಿ ಭಾರತವು ಜಗತ್ತಿನ ಟಾಪ್ 10 ದೇಶಗಳಲ್ಲೊಂದು. ಇಲ್ಲಿ ದೊಡ್ಡ ಪ್ರಮಾಣದಲ್ಲಿ ಡ್ರಗ್ಸ್ ಸೇವಿಸುವವರಿದ್ದಾರೆ ಎಂಬುದು ಒಂದು ಸಂಗತಿಯಾದರೆ, ನಮ್ಮ ದೇಶ ಇರುವ ಸ್ಥಳವು ಭೌಗೋಳಿಕವಾಗಿ ಡ್ರಗ್ಸ್ ಹಂಚಿಕೆಗೆ ಹೇಳಿಮಾಡಿಸಿದಂತಿದೆ. ಇಲ್ಲಿಂದ ಬೇರೆ ಬೇರೆ ಕಡೆಗೆ ಡ್ರಗ್ಸ್ ಸರಬರಾಜಾಗುತ್ತದೆ. ಜಗತ್ತಿನಲ್ಲಿ ಪ್ರತಿವರ್ಷ ಉತ್ಪಾದನೆಯಾಗುವ ಒಟ್ಟು ಡ್ರಗ್ಸ್‌ನಲ್ಲಿ ಅಫ್ಘಾನಿಸ್ತಾನದ ಅಫೀಮಿನ ಪಾಲೇ ಶೇ.40ರಷ್ಟಿದೆ. ಅದು ಭಾರತಕ್ಕೆ ಕಳ್ಳಸಾಗಣೆಯಾಗಿ ಸಂಸ್ಕರಣೆಗೆ ಒಳಗಾಗುತ್ತದೆ. ನಂತರ ಇಲ್ಲಿಂದ ಸಂಸ್ಕರಿತ ಡ್ರಗ್ ಜಗತ್ತಿನ ಬೇರೆ ಬೇರೆ ಭಾಗಗಳಿಗೆ ರಫ್ತಾಗುತ್ತದೆ. ದುರದೃಷ್ಟವಶಾತ್ ಸಿಂಗಾಪುರ ಮುಂತಾದ ಕಡೆ ಇರುವಂತೆ ನಮ್ಮಲ್ಲಿ ಡ್ರಗ್ಸ್ ವಿರುದ್ಧ ಕಠಿಣ ಕಾಯ್ದೆಯಿಲ್ಲ. ಅಲ್ಲಿ ಡ್ರಗ್ಸ್ ಹೊಂದಿದ್ದರೆ ಮರಣ ದಂಡನೆ ವಿಧಿಸಲಾಗುತ್ತದೆ. ನಮ್ಮಲ್ಲೂ ಅಂತಹ ವ್ಯವಸ್ಥೆ ಬರಬೇಕು. ನಾವು ಡ್ರಗ್ಸ್ ಎಂಬ ಸಾಮಾಜಿಕ ಪಿಡುಗಿನ ವಿರುದ್ಧ ಆಡಳಿತಾತ್ಮಕವಾಗಿಯೂ, ಸಾಮಾಜಿಕ ಮಟ್ಟದಲ್ಲೂ ಹೋರಾಡಬೇಕು. ನಾವು ಎಚ್ಚೆತ್ತುಕೊಂಡರಷ್ಟೇ ನಮ್ಮ ಮಕ್ಕಳು ಮಾದಕ ವ್ಯಸನ ಮತ್ತು ಅದರ ಜತೆಗೆ ಸೇರಿಕೊಂಡಿರುವ ಕತ್ತಲ ಲೋಕಕ್ಕೆ ಜಾರುವುದನ್ನು ತಪ್ಪಿಸಲು ಸಾಧ್ಯ.

ಕೆಲ ದಿನಗಳ ಹಿಂದೆ ನಾನು ಎನ್‌ಸಿಬಿ ನಿರ್ದೇಶಕ ಸಮೀರ್ ವಾಂಖೇಡೆ ಜತೆ ಮಾತನಾಡುತ್ತಿದ್ದೆ. 'ನೀವೊಬ್ಬ ರೈತನ ಮಗ. ಸ್ವಾತಂತ್ರ್ಯ ಹೋರಾಟದ ನೆಲವಾದ ವಿದರ್ಭದಿಂದ ಬಂದಿದ್ದೀರಿ. ಡ್ರಗ್ಸ್ ವಿರುದ್ಧ ಸಮರ ಸಾರಲು ನಿಮಗೊಂದು ಒಳ್ಳೆಯ ಅವಕಾಶ ಸಿಕ್ಕಿದೆ. ಅದಕ್ಕೆ ಬೆನ್ನೆಲುಬಾಗಿ ನಿಮ್ಮ ಅಪ್ಪ ಅಮ್ಮ ಬಿತ್ತಿದ ಮೌಲ್ಯಗಳು ನಿಮ್ಮಲ್ಲಿವೆ. ಯಾವುದೇ ಕಾರಣಕ್ಕೂ ಈ ಡ್ರಗ್ಸ್ ಡೀಲರ್‌ಗಳನ್ನು ಸುಮ್ಮನೆ ಬಿಡಬೇಡಿ ಎಂದು ಹೇಳಿದೆ. ಅವರು ಖಂಡಿತ ಡ್ರಗ್ಸ್ ದಂಧೆಯ ನರಗಳನ್ನು ಕತ್ತರಿಸುವುದಾಗಿ ಭರವಸೆ ನೀಡಿದರು. ಸಮೀರ್ ಅಕ್ಷರಶಃ ಆ ಕೆಲಸ ಮಾಡುತ್ತಿದ್ದಾರೆ ಎಂಬುದೇ ಖುಷಿಯ ಸಂಗತಿ. ಅವರಂತಹ ಅಧಿಕಾರಿಗಳಿಗೆ ರಾಜಕಾರಣಿಗಳು ಬೇಷರತ್ ಬೆಂಬಲ ನೀಡಬೇಕು. ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಉದ್ಧವ್ ಠಾಕ್ರೆಯವರ ಕುಟುಂಬಗಳ ಹಿನ್ನೆಲೆಯನ್ನು ಗಮನಿಸಿದರೆ ನಿಸ್ಸಂಶಯವಾಗಿ ಅವರು ಮಾದಕ ವಸ್ತು ಜಾಲವನ್ನು ಹೊಸಕಿಹಾಕಲು ಕ್ರಮ ಕೈಗೊಳ್ಳುತ್ತಾರೆಂಬ ವಿಶ್ವಾಸ ನನಗಿದೆ.

ಮುಗಿಸುವ ಮುನ್ನ...

ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಡಾಕ್ಟರ್ ಒಬ್ಬರ ಜತೆ ಇತ್ತೀಚೆಗೆ ಮಾತನಾಡುತ್ತಿದ್ದೆ. ಅವರು ಪ್ರತಿ ಬಾರಿ ಶಸ್ತ್ರಚಿಕಿತ್ಸೆ ನಡೆಸುವಾಗಲೂ ರೋಗಿಯ ಬಳಿ ನೀವು ಯಾವುದಾದರೂ ಮಾದಕ ವಸ್ತುವಿಗೆ ಅಡಿಕ್ಟ್ ಆಗಿದ್ದೀರಾ ಅಥವಾ ಯಾವುದಾದರೂ ಡ್ರಗ್ಸ್ ಸೇವಿಸುತ್ತೀರಾ ಎಂದು ಕೇಳುತ್ತಾರಂತೆ. ಆಘಾತಕಾರಿ ಸಂಗತಿಯೆಂದರೆ, ಶೇ.80ರಷ್ಟು ಯುವಜನರು ತಾವು ಒಂದಲ್ಲಾ ಒಂದು ರೀತಿಯ ಡ್ರಗ್ಸ್ ಸೇವಿಸುವುದಾಗಿ ಹೇಳುತ್ತಾರಂತೆ! ದಯವಿಟ್ಟು ಯೋಚಿಸಿ... ನಿಮ್ಮ ಮಗು ಕೂಡ ಆ ವ್ಯಸನಿಗಳಲ್ಲಿ ಸೇರಿದೆಯೇ?

'ಪುಸ್ತಕ vs ಇಂಟರ್ನೆಟ್'

ಅಭಿವ್ಯಕ್ತಿ

ಶ್ರೀನಿವಾಸ

vveditoped@gmail.com

ಮನುಷ್ಯ ಜ್ಞಾನ ಸಂಪಾದನೆ ಮಾಡಬೇಕಾದರೆ ದೇಶ ಸುತ್ತು ಕೋಶ ಓದು 'ಅಂತ ಒಂದು ಮಾತಿದೆ. ಇಂಟರ್ನೆಟ್ ಶುರುವಾದಾಗಿನಿಂದ ಈ ನಾಣ್ಣುಡಿಯ ಮಹತ್ವ ಕಡಿಮೆ ಆಗುತ್ತಲೇ ಇದೆ. ದೇಶ ನೋಡುವುದು, ಕೋಶ ಓದುವುದು ಇವೆರಡಕ್ಕೂ ಇಂಟರ್ನೆಟ್ (ಅಂತರ್ಜಾಲ) ಇದ್ದರೆ ಸಾಕು ಎಂಬಂತಾಗಿದೆ. ಕೋಶ ಅಂತೂ ಅಪ್ರಸ್ತುತವಾಗಿದೆ. ಏನಾದರೂ ವಿಷಯ ತಿಳಿಯಬೇಕೆನಿಸಿದರೆ ಗೂಗಲ್. ಅದರ ವಿವರಣೆ ಬೇಕೆನಿಸಿದರೆ ಯೂಟ್ಯೂಬ್. ಕೋರ್ಸೆರಾ, ಉಡೆಮಿ, Unacademy, ಖಾನ್ ಅಕಾಡೆಮಿ, Byzus , Stack Overflow ಹೀಗೆ ಹಲವಾರು ವೆಬ್ ಸೈಟ್‌ಗಳಿಂದ ನಮಗೆ ಬೇಕಾದ ಯಾವುದೇ ವಿಷಯವನ್ನು ತಿಳಿಯಬಹುದಾಗಿದೆ. ವಿಷಯ ತಿಳಿಯಲು ಪುಸ್ತಕ ಓದಬೇಕೆನ್ನುವ ಯೋಚನೆಯೇ ಬಾರದಂತಾಗಿದೆ.

ಮನುಕುಲದ ಬೆಳವಣಿಗೆಯಲ್ಲಿ ಪುಸ್ತಕದ ಪಾತ್ರ ಮಹತ್ವದ್ದಾಗಿತ್ತು. ಅದು 15ನೆಯ ಶತಮಾನದಲ್ಲಿ Johannes Gutenberg ಪ್ರೆಸ್‌ನಿಂದ ಶುರುವಾಗಿ ಯೂರೋಪಿನ ಕೈಗಾರಿಕಾ ಕ್ರಾಂತಿ, Renaissance, ಹಾಗೂ 18, 19ನೆಯ ಶತಮಾನದ ವಿಜ್ಞಾನ ಸಂಶೋಧನೆಗಳಿಗೆ ಬಹುಮುಖ್ಯ ಸಾಧನವಾಗಿತ್ತು.ಆದರೆ ಇದೆಲ್ಲವೂ ಇಂಟರ್ನೆಟ್ ಇಲ್ಲದ ಕಾಲದ ಇತಿಹಾಸ. ಕಳೆದ ಕೆಲವು ಶತಮಾನಗಳ ಕಾಲ ಪುಸ್ತಕ ಎಂಬುದು ಕೋಟ್ಯಂತರ ಜನರಿಗೆ ಜ್ಞಾನ ಹರಡಲು ಪ್ರಚಲಿತವಿದ್ದ ಮಾಧ್ಯಮವಾಗಿತ್ತು. ಈಗ ಆ ಸ್ಥಾನವನ್ನು ಇಂಟರ್ನೆಟ್ ಆಕ್ರಮಿಸಿದೆ.

ಕಂಪ್ಯೂಟರ್ ಪ್ರವೇಶದ ನಂತರ ಹಾಗೂ ಇತ್ತೀಚಿನ ವರ್ಷಗಳ 4ಎ, 5ಎ ತಂತ್ರಜ್ಞಾನದ ಮಿಂಚಿನ ವೇಗದ ಇಂಟರ್ನೆಟ್‌ನಿಂದಾಗಿ ವಿಶ್ವದ ಒಂದು ಭಾಗದ ಖ್ಯಾತ ಅಧ್ಯಾಪಕರ ಪಾಠವನ್ನು ಇನ್ನಾವುದೋ ಮೂಲೆಯಲ್ಲಿನ ವಿದ್ಯಾರ್ಥಿಯು ಶಾಲಾ ಕಾಲೇಜು ತರಗತಿಗಳಿಗಿಂತ ಸುಸೂತ್ರವಾಗಿ ಕೇಳಬಹುದು.

ಪುಸ್ತಕವು ಜ್ಞಾನಾರ್ಜನೆಯ ಒಂದು ಮಾರ್ಗವಷ್ಟೇ. ಅದರಂತೆ ಹಲವು ಮಾರ್ಗಗಳಿವೆ. ಕಥೆ, ಹಾಡು, ಜನಪದ, ಕೀರ್ತನೆ, ನೃತ್ಯ, ಗಮಕ, ನಾಟಕ, ಯಕ್ಷಗಾನ, ರೂಪಕ, ಶಿಲ್ಪಕಲೆ , ಚಿತ್ರಕಲೆ ಇನ್ನೂ ಮುಂತಾದ ಮಾಧ್ಯಮಗಳ ಮೂಲಕ ಜ್ಞಾನವು ಒಬ್ಬರಿಂದೊಬ್ಬರಿಗೆ ಹರಡಲ್ಪಟ್ಟಿದೆ. ವೇದಗಳು, ಉಪನಿಷತ್ತುಗಳು ತಾಳೆಗರಿ, ತಾಮ್ರ ಪತ್ರಗಳಲ್ಲಿ ಬರೆದುದ್ದಕ್ಕಿಂತ ಕಂಠಪಾಠದ ಮೂಲಕ ಹೆಚ್ಚು ಹರಡಿವೆ. ನಾವೆಲ್ಲ ರಾಮಾಯಣ, ಮಹಾಭಾರತ, ವಿಷ್ಣುಪುರಾಣ ಮುಂತಾದ ಪುರಾಣ ಕಥೆಗಳನ್ನು ಓದಿದ್ದಕ್ಕಿಂತ ಕೇಳಿದ್ದು ಹಾಗೂ ಟಿವಿಗಳಲ್ಲಿ ನೋಡಿ ತಿಳಿದಿದ್ದೇ ಹೆಚ್ಚು. ವಾಲ್ಮೀಕಿಯ ರಾಮಾಯಣ ಓದಿ ತಿಳಿದವರಿಗಿಂತ, ತುಳಸಿದಾಸರ ರಾಮಚರಿತ ಮಾನಸ ಕೇಳಿ ತಿಳಿದವರೇ ಹೆಚ್ಚು ಮಂದಿ. ನನ್ನ ಶೈಕ್ಷಣಿಕ ಜೀವನ ಪೂರ್ತಿ ಓದುವುದರಲ್ಲೆ ಕಳೆದುಹೋಗಿತ್ತು. ಸ್ವಭಾವತಃ ನಾನು ಉತ್ತಮ ಕೇಳುಗಾರನಲ್ಲ. ಅಂದರೆ ಒಮ್ಮೆ ಅಧ್ಯಾಪಕ ಪಾಠ ಮಾಡಿದ್ದನ್ನು ಮನಸಿಟ್ಟು ಕೇಳಿ, ಯಥಾವತ್ತಾಗಿ ನೆನಪಿನಲ್ಲಿಟ್ಟುಕೊಳ್ಳುವಷ್ಟು ಏಕಾಗ್ರತೆ ನನ್ನಲಿಲ್ಲ. ತರಗತಿಯಲ್ಲಿ ಅಧ್ಯಾಪಕರನ್ನು ಮತ್ತೊಮ್ಮೆ ಹೇಳಿ ಎಂದು ಕೇಳುವಷ್ಟು ಧೈರ್ಯವಿರುತ್ತಿರಲಿಲ್ಲ. ಬದಲಾಗಿ ಮನೆಗೆ ಬಂದ ನಂತರ ಪುಸ್ತಕ ಓದಿ ವಿಷಯವನ್ನು ತಿಳಿಯುತ್ತಿದ್ದೆ. ಹೀಗೆ ಪಾಠ ಕೇಳುವ ಬದಲಿಗೆ ಪುಸ್ತಕ ಓದಿಯೇ ಜ್ಞಾನಾರ್ಜನೆ ಯಾಗುತ್ತಿತ್ತು.

ನನಗೂ ಕೂಡ ಹೊಸ ವಿಷಯ ತಿಳಿಯಲು ಯೂಟ್ಯೂಬ್ ಮೊರೆ ಹೋಗುವುದು ಸಹಜ, ಸಲೀಸಾದ ಮಾರ್ಗವಾಗಿ ಬಿಟ್ಟಿದೆ. ಕಳೆದ ಕೆಲವು ವರ್ಷಗಳಿಂದ Software ರಂಗದಲ್ಲಿ ಹೆಚ್ಚು ಪ್ರಚಲಿತವಾಗಿರುವ Machine learning ಎಂಬ ವಿಷಯದ ಕುರಿತು ತಿಳಿಯಲು ಒಂದು ಪುಸ್ತಕ ಖರೀದಿಸಿದೆ. ಆದರೆ ಅದನ್ನು ಓದುವ ಬದಲಿಗೆ ಆನ್ ಲೈನ್ ಕೋರ್ಸ್‌ಗಳು , ಯೂಟ್ಯೂಬ್ ನಲ್ಲಿ ಸಿಗುವ ಲೆಕ್ಚರ್‌ಗಳನ್ನ ಕೇಳುವುದೇ ಸುಲಭವೆನಿಸಿಬಿಟ್ಟಿದೆ. ಅಂತಹ ಲೆಕ್ಚರ್ ಗಳಿಂದಲೇ ಹಲವು ವಿಷಯಗಳು ಅರ್ಥವಾಗಿವೆ. ಪುಸ್ತಕ ಮೂಲೆಗುಂಪಾಗಿದೆ. ಮೊನ್ನೆ ಭಾನುವಾರ ಮನೆ ಸಜ್ಜಾಗಿಡುವಾಗ ಮೂಲೆಯಲ್ಲಿ ಕಂಡು ಬಂದ ಧೂಳು ಮೆತ್ತಿದ ಮಷೀನ್ ಲರ್ನಿಂಗ್ ಪುಸ್ತಕ ನೋಡಿ, ನನ್ನಲ್ಲಾದ ಈ ಬದಲಾವಣೆ, ಕೇವಲ ನನಗಾದದ್ದೋ ಅಥವಾ ಇದು ತಂತ್ರಜ್ಞಾನ ಯುಗದ ಬದಲಾವಣೆಯೋ ಎಂಬ ಜಿಜ್ಞಾಸೆಗೊಳಗಾಗಿ ಈ ಲೇಖನ ಬರೆದಿರುವೆ.

ಭಟ್ಟರ್ ಸ್ನ್ಯಾಕ್

- **ಗುರುನಾರಾಯಣ ಪಟಪಲ್ಲಿ, (ಇಮೇಲ್ ಮೂಲಕ)**
  ಭಟ್ರೇ, ಸಿದ್ದರಾಮಯ್ಯಗೆ ಕೇಂದ್ರಕ್ಕಿಂತ ರಾಜ್ಯದ ಬಗ್ಗೆಯೇ ಹೆಚ್ಚಿನ ಕಾಳಜಿ, ಏಕೆ?
  - ಹಿಂದಿ ಬಾರದಿರುವುದು ಸಹ ಒಂದು ಕಾರಣವಂತೆ!
- **ಬೆಂ. ಮು. ಮಾರುತಿ, ಮಲ್ಲತ್ತಹಳ್ಳಿ**
  ಭಟ್ರೇ, ಗೂಬೆ ಅಪಶಕುನ ಅಂತಾರೆ, ನಿಜನಾ ?
  -ಅಸಲಿ ಸಂಗತಿ ಅಂದ್ರೆ, ಗೂಬೆಗಳಿಗೆ ಮನುಷ್ಯ ಅಪಶಕುನವಂತೆ!
- **ಎ ಕೃಷ್ಣಕುಮಾರ್, ಕೋಲಾರ**
  ಭಟ್ರೇ, ದಂಪತಿಗಳು ಪರಸ್ಪರ ಅರಿಯುವುದು ಯಾವಾಗ ?
  - ಉತ್ತರ ಗೊತ್ತಿಲ್ಲದ ಪ್ರಶ್ನೆಗಳನ್ನು ಕೇಳಿದರೆ ಹೇಗೆ?!
- **ನಾಗರಾಜ ಹೆಗಡೆ, ಯಲ್ಲಾಪುರ**
  ಭಟ್ರೇ, ಯಡಿಯೂರಪ್ಪ- ಸಿದ್ರಾಮಯ್ಯ ಜತೆಯಾಗ್ತಾರಾ?
  - ರಾಜಕಾರಣದಲ್ಲಿ ಯಾರು ಯಾರ ಕೈಹಿಡಿಯಬಹುದು ಮತ್ತು ಕೈಕೊಡಬಹುದು!
- **ಶ್ರೀ ನಾಥ ಪಟ್ಟಾಜೆ, ಬೆಂಗಳೂರು**
  ಭಟ್ರೇ, ಡಿಕೆಶಿ ಕಮಿಷನ್ ಗಿರಾಕಿ ಎಂದು ಉಗ್ರಪ್ಪ ಹೇಳಿದ್ದಾರಲ್ಲ?
  -ಕೆಲವು ಸತ್ಯಗಳನ್ನು ಅಷ್ಟು ನೇರಾನೇರ ಹೇಳಬಾರದಿತ್ತು!
- **ರಾಜೀವ ಕೆ.ಕುಲಕರ್ಣಿ, (ಇಮೇಲ್ ಮೂಲಕ)**
  ಭಟ್ರೇ, ಜೀವನ ಅತ್ಯಲ್ಪ ಕಾಲದ್ದು ಅಂತ ಹೇಳ್ತಾರಲ್ಲ?
  - ಅಂಥವರಿಗೆ ಪೊಲೀಸ್ ಪೇದೆ ಹುದ್ದೆಗೆ ಅರ್ಜಿ ಹಾಕಿ ಕಾಯಿ ಅಂತ ಹೇಳಬೇಕಿತ್ತು !
- **ಜಗದೀಶ ಮಾನೆ, (ಇಮೇಲ್ ಮೂಲಕ)**
  ಭಟ್ರೇ, ನಿಮ್ಮಿಂದ ಉತ್ತರ ಪಡೆಯುವುದು ಸುಲಭವಂತೆ?
  -ಅದರಲ್ಲೂ ಹುಡುಗಿಯರಾದರೆ ಇನ್ನೂ ಸುಲಭ ಅನ್ನೋದು ಬರ್ಕಲಿ ರಮೇಶ ಆರೋಪ!
- **ಕಾಳಪ್ಪ ಬಡಿಗೇರ, (ಇಮೇಲ್ ಮೂಲಕ)**
  ಭಟ್ರೇ, ನಿಮಗೆ ಥಾರ್ ಜೀಪ್ ಅಂದ್ರೆ, ಬಹಳ ಇಷ್ಟವಂತೆ?
  - ಅದು ಹೆಂಗಸಾಗಿದ್ದರೆ, ನಾನು ಸದಾ ಅಲ್ಲಿಯೇ ವಾಸಿಸುತ್ತಿದ್ದೆ ಎಂಬುದು ನನ್ನ ಹೆಂಡತಿ ಮೂದಲಿಕೆ!
- **ರಾಜೇಶ ಶ್ರೀಮಂತ, ಬೆಂಗಳೂರು**
  ಭಟ್ರೇ, ಹೆಣ್ಣಿನ ಸೌಂದರ್ಯಕ್ಕೆ ಸೋಲದವರು ಯಾರಾದರೂ ಇದ್ದಾರಾ?
  -ಅದನ್ನು ನೋಡೋ ಬದಲು ಹೆಣ್ಣಿನ ಸೌಂದರ್ಯವನ್ನೇ ನೋಡುತ್ತಿರಬಹುದಲ್ಲ?!
- **ಸ್ವಾತಿ (ಇಮೇಲ್ ಮೂಲಕ)**
  ಭಟ್ರೇ, ಪುಸ್ತಕ ಹಿಡಿದಾಗ ನಿದ್ದೆ ಬರುತ್ತದಲ್ಲಾ, ಏನು ಮಾಡಲಿ ?
  -ನಿದ್ದೆ ಬರುವಾಗ ಪುಸ್ತಕ ಹಿಡಿಯಬೇಡ!

ನಮ್ಮ ನಾಡಿನ ಸಾಂಸ್ಕೃತಿಕ ವೈಭವದ ಪ್ರತೀಕ ಮೈಸೂರು ದಸರಾ

ತನ್ನಿಮಿತ್ತ

ಲಕ್ಷ್ಮೀ ಕಿಶೋರ್ ಅರಸ್ ಕೂಡ್ಲೂರು

vveditoped@gmail.com

ವಿಜಯದಶಮಿಯಂದು ಆನೆಯ ಮೇಲೆ 'ಚಿನ್ನದಂಬಾರಿಯಲ್ಲಿ' ಕುಳಿತು ವಾದ್ಯಮೇಳ, ಸೇನಾ ತುಕಡಿ, ಅಶ್ವಪಡೆ, ಗಜಪಡೆ, ಒಂಟೆದಳ ಎಲ್ಲಾ ರೀತಿಯ ರಕ್ಷಣಾ ದಳಗಳನೊಳಗೊಂಡು ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿ, ವಿಜಯಯಾತ್ರೆಯ ಸಂಕಲ್ಪವಾಗಿ ಬನ್ನಿ ಪೂಜೆ ಮಾಡುವ ಪರಿಪಾಠವನ್ನು ರಾಜ ಒಡೆಯರು ಹುಟ್ಟುಹಾಕುತ್ತಾರೆ 1610 ರಲ್ಲಿ ಪ್ರಥಮ ಬಾರಿಗೆ ದಸರಾ ಮಹೋತ್ಸವವನ್ನು ಆಚರಣೆಗೆ ತಂದ ಕೀರ್ತಿ ರಾಜ ಒಡೆಯರಿಗೆ ಸಲ್ಲುತ್ತದೆ.

ಭಾರತವಷ್ಟೇ ಅಲ್ಲ ಇಡೀ ಪ್ರಪಂಚದಾದ್ಯಂತ ಐತಿಹಾಸಿಕ, ಸಾಂಸ್ಕೃತಿಕ, ವೈಭವಪೂರಿತವಾದ ರಾಜವೈಭವವನ್ನು, ನಾಡಿನ ಸಾಂಸ್ಕೃತಿಕತೆಯನ್ನು ಬಿಂಬಿಸುವ ಏಕೈಕ ಹಬ್ಬವೆಂದು, ಮೆರವಣಿಗೆಯೆಂದು ಯಾವುದಾದರೂ ಇದ್ದರೆ ಅದು ನಮ್ಮ ಕನ್ನಡ ನಾಡಿನ ಹೆಮ್ಮೆಯ ಪ್ರತೀಕವಾದ 'ಮೈಸೂರು ದಸರಾ' ಮಾತ್ರ. ದಸರಾ ಕನ್ನಡನಾಡಿನ 'ನಾಡ ಹಬ್ಬವೆಂದೇ' ಪ್ರಖ್ಯಾತಿ ಹೊಂದಿದೆ.ನಾಡಿನ ಪ್ರತಿಯೊಬ್ಬರು ಸಹ ಶ್ರದ್ಧಾ ಭಕ್ತಿಯಿಂದ ದಸರಾ ಹಬ್ಬವನ್ನು ಆಚರಿಸುತ್ತಾರೆ ಇಂತಹ ದಸರಾ ಹಬ್ಬವನ್ನು, ನವರಾತ್ರಿಯ ವೈಭವವನ್ನು, ದಸರಾ ಸಮಯದಲ್ಲಿ ಸಾಂಸ್ಕೃತಿಕ ಮೆರವಣಿಗೆ, ಹಲವಾರು ರೀತಿಯ ರಾಜವೈಭವದ ಕುರುಹನ್ನು, ವಿಜಯದಶಮಿಯಂದು ಚಿನ್ನದಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ಅಮ್ಮನವರ ಕಣ್ತುಂಬಿಕೊಳ್ಳುವ ದಸರಾ ಮಹೋತ್ಸವವನ್ನು ಮೈಸೂರು ಅರಸರು ಇಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಿದ್ದಾರೆ ಎಂದರೆ ತಪ್ಪಾಗಲಾರದು. ದಸರಾ ಹಬ್ಬದ ಪರಿಕಲ್ಪನೆ ಶುರುವಾಗಿದ್ದು 'ವಿಜಯನಗರದ ಅರಸರ' ಕಾಲದಲ್ಲಿ ನವರಾತ್ರಿ ಆಚರಣೆ ವಿಜಯದಶಮಿ ದಿನದಂದು ವಿಜಯಯಾತ್ರೆಯ ರೀತಿಯಲ್ಲಿ ಆನೆಯ ಮೇಲೆ ಮೆರವಣಿಗೆ ನಡೆಯುತ್ತಿತ್ತು, ಶತ್ರುಗಳೊಡನೆ ಯುದ್ಧವನ್ನು ಜಯಿಸಿದ ಕುರುಹಾಗಿ ವಿಜಯಯಾತ್ರೆಯನ್ನು ಕೈಗೊಳ್ಳುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಪತನಾನಂತರ ದಕ್ಷಿಣದಲ್ಲಿ ಬಲಿಷ್ಠವಾಗಿ ರೂಪುಗೊಂಡ 'ಮೈಸೂರು ಸಂಸ್ಥಾನದ ಅರಸರು' ಈ ದಸರಾ ಆಚರಣೆಯನ್ನು ಮುಂದುವರಿಸಿದರು. ವಿಜಯನಗರದ ಶ್ರೀರಂಗಪಟ್ಟಣ ರಾಯಭಾರಿಯಾದ ತಿರುಮಲರಾಯನನ್ನು 'ರಾಜ ಒಡೆಯರು' ಸೋಲಿಸುತ್ತಾರೆ. ತಿರುಮಲರಾಯ ಪರಾಕ್ರಮಿಯಾದ ರಾಜ ಒಡೆಯರ ಮುಂದೆ ಸೋತು ಮಂಡಿಯೂರಿ ಅವರಿಗೆ ಶರಣಾಗಿ ಇನ್ನು ಮುಂದೆ ದಸರಾ ವೈಭವವನ್ನು ಮುಂದುವರಿಸುವವರು ಯಾರಾದರೂ ಇದ್ದರೆ ಅದು ಮೈಸೂರು ಸಂಸ್ಥಾನ ಮಾತ್ರ ಎಂದು ತಾನು ಮಣ್ಣಿನಲ್ಲಿ ಹೂತಿಟ್ಟಿದ್ದ ವಿಜಯನಗರ ಕಾಲದ ರತ್ನಖಚಿತ ಸಿಂಹಾಸನವನ್ನು ರಾಜ ಒಡೆಯರಿಗೆ ನೀಡುತ್ತಾನೆ. ಅಂದಿನಿಂದ ಮೈಸೂರಿನ ಪ್ರಸಿದ್ಧ ದೊರೆಗಳಾದ ಯದುಕುಲ ತಿಲಕ, ಹರಿರಾಯರಗಂಡ ಬಿರುದಾಂಕಿತ 'ರಾಜ ಒಡೆಯರು' ಸ್ವರ್ಣ ಸಿಂಹಾಸನದ ಮೇಲೆ ಕುಳಿತು ನವರಾತ್ರಿ ಸಂದರ್ಭದಲ್ಲಿ ದರ್ಬಾರ್ ನಡೆಸುತ್ತಾ ಕರ್ನಾಟಕರತ್ನ ಸಿಂಹಾಸನಾರೂಢರಾಗಿ, ಕರ್ನಾಟಕ ದಿವ್ಯರತ್ನ ಸಿಂಹಾಸನಾಧೀಶ್ವರರಾಗಿ ದಸರಾ ಹಬ್ಬಕ್ಕೆ ವಿಶೇಷ ಮೆರಗು ನೀಡಿ ನವರಾತ್ರಿಯ ಒಂಬತ್ತು ದಿನಗಳ ಕಾಲ ಆದಿಶಕ್ತಿಯನ್ನು ಪೂಜಿಸುತ್ತಾ ಆಯುಧ ಪೂಜೆಯೆಂದು ಅರಮನೆಯ ಎಲ್ಲ ವಸ್ತುಗಳನ್ನು ಪೂಜಿಸುವ ಪರಿಪಾಠವನ್ನು ರೂಢಿಸಿಕೊಂಡು ಲೋಕಕ್ಕೆ ಆಯುಧಪೂಜೆಯ ಮಹತ್ವವನ್ನು ತಿಳಿಸಿದ್ದು ಇದೇ ರಾಜ ಒಡೆಯರು. ಮತ್ತು ನವರಾತ್ರಿಯ ಕೊನೆಯ ದಿನವಾದ ವಿಜಯದಶಮಿಯಂದು ಆನೆಯ ಮೇಲೆ 'ಚಿನ್ನದಂಬಾರಿಯಲ್ಲಿ' ಕುಳಿತು ವಾದ್ಯಮೇಳ, ಸೇನಾ ತುಕಡಿ, ಅಶ್ವಪಡೆ, ಗಜಪಡೆ, ಒಂಟೆದಳ ಎಲ್ಲಾ ರೀತಿಯ ರಕ್ಷಣಾ ದಳಗಳನೊಳಗೊಂಡು ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿ, ವಿಜಯಯಾತ್ರೆಯ ಸಂಕಲ್ಪ ವಾಗಿ ಬನ್ನಿ ಪೂಜೆ (ಶಮಿವೃಕ್ಷ ಪೂಜೆ) ಮಾಡುವ ಪರಿಪಾಠವನ್ನು ರಾಜ ಒಡೆಯರು ಹುಟ್ಟುಹಾಕುತ್ತಾರೆ 1610 ರಲ್ಲಿ ಪ್ರಥಮ ಬಾರಿಗೆ ದಸರಾ ಮಹೋತ್ಸವವನ್ನು ಆಚರಣೆಗೆ ತಂದ ಕೀರ್ತಿ ರಾಜ ಒಡೆಯರಿಗೆ ಸಲ್ಲುತ್ತದೆ. ಮುಂದೆ 'ಜಯಚಾಮರಾಜ ದತ್ತ ಒಡೆಯರ' ಕಾಲದವರೆಗೂ ಚಿನ್ನದ ಅಂಬಾರಿಯಲ್ಲಿ ಮಹಾರಾಜರುಗಳೇ ಮೆರವಣಿಗೆ ಹೋಗುತ್ತಾರೆ ಆದರೆ ಪ್ರಜಾಪ್ರಭುತ್ವ ವ್ಯವಸ್ಥೆ ಬಲಿಷ್ಠಗೊಂಡ ನಂತರ 1971 ರಿಂದ ಆಚೆಗೆ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ಮೆರವಣಿಗೆ ನಡೆಯುತ್ತದೆ. ಇಂದಿಗೂ ಇದೇ ಮುಂದುವರಿದಿದೆ 1971 ತನಕ ದಸರಾ ಮಹೋತ್ಸವವೂ ಮೈಸೂರು ಅರಮನೆಯಿಂದಲೇ ನಡೆಸಲಾಗುತ್ತಿತ್ತು ಅಂದು ಮಹಾರಾಜರುಗಳು ಅಂಬಾರಿಯಲ್ಲಿ ಕೂತು ರಾಜಗಾಂಭೀರ್ಯದಿಂದ ಸಾಗುತ್ತಿದ್ದರು ಇದನ್ನು ಕಣ್ತುಂಬಿಕೊಳ್ಳಲು ಜನತೆ ಸಾಗರೋಪಾದಿಯಾಗಿ ಬರುತ್ತಿದ್ದರು. ಆದರೆ 1971 ರಲ್ಲಿ ಕೇಂದ್ರ ಸರಕಾರ ಮಹಾರಾಜರಿಗೆ ನೀಡಿದ ವಿಶೇಷ ಸವಲತ್ತುಗಳನ್ನು ರದ್ದುಗೊಳಿಸಿ ರಾಜಧನವನ್ನು ರದ್ದು ಮಾಡುತ್ತಾರೆ. ಈ ಕಾಯ್ದೆಯ ನಂತರ ಮಹಾರಾಜ ಜಯಚಾಮರಾಜ ಒಡೆಯರು ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಾರೆ. ಅಂದಿನ ಕೇಂದ್ರಸರಕಾರದ ಕಿರುಕುಳದಿಂದ ಬೇಸತ್ತು ಅಲ್ಲಿಂದಾಚೆಗೆ ದಸರಾ ಹಬ್ಬವನ್ನು ಸರಕಾರ ನಡೆಸಬೇಕೆಂದು ಪತ್ರ ಬರೆಯುತ್ತಾರೆ. ಮಹಾರಾಜರ ಪತ್ರದಂತೆ ಅಂದಿನ ರಾಜ್ಯ ಸರಕಾರವು ದಸರಾ ಹಬ್ಬವನ್ನು ನಾಡಹಬ್ಬವಾಗಿ ಘೋಷಿಸಿ ಸರಕಾರದ ವತಿಯಿಂದ ಆಚರಿಸುತ್ತಾರೆ. ಮುಂದೆ ಎಲ್ಲಾ ಸರಕಾರಗಳು ನಾಡಹಬ್ಬವನ್ನು ಮುಂದುವರಿಸಿಕೊಂಡು ಹೋಗುತ್ತಿವೆ ಏನೇ ಆಗಲಿ ಸರಕಾರ ಎಷ್ಟೇ ಖರ್ಚು ಮಾಡಿದರು, ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸಿದರು ಸಹ ದಸರಾ ಮೆರಗು ಮೈಸೂರು ಮಹಾರಾಜರ ಕಾಲದಲ್ಲಿ ಜರುಗುತ್ತಿದ್ದ ರೀತಿ ಆ ರಾಜವೈಭವದ ವಿಜೃಂಭಣೆ, ಅಂಬಾರಿಯಲ್ಲಿ ಮಹಾರಾಜರ ದರ್ಶನ, ಅರಮನೆಯ ಸಂಗೀತಗಾರರ ಮೆರವಣಿಗೆ, ಗಜಪಡೆ, ಅಶ್ವಪಡೆ, ಮುಂತಾದ ಸೈನಿಕ ತುಕಡಿಗಳ ಐತಿಹಾಸಿಕ ವೈಭವದ ಮೆರವಣಿಗೆಯನ್ನು, ರಾಜಾಡಳಿತ ಕಾಲದ ದಸರಾ ಪರಂಪರೆಯನ್ನು ಸರಕಾರಗಳು ಖಂಡಿತ ನೀಡಲು ಸಾಧ್ಯವಿಲ್ಲ...

ಮೈಸೂರು ಮಹಾರಾಜರ ಕಾಲದಲ್ಲಿನ ದಸರಾ ವೈಭವ...

ರಾಜ ಒಡೆಯರ ನಂತರ ಬಂದ ಪ್ರತಿಯೊಬ್ಬ ದೊರೆಗಳು ಸಹ ಪ್ರತಿವರ್ಷ ಚಾಚೂತಪ್ಪದೆ ದಸರಾ ಮಹೋತ್ಸವವನ್ನು ವರ್ಷದಿಂದ ವರ್ಷಕ್ಕೆ ವಿಜೃಂಭಣೆಯಿಂದ ಆಚರಿಸುತ್ತಾ ಬರುತ್ತಾರೆ. ದಸರಾ ಮೆರವಣಿಗೆಯಲ್ಲಿ ನೆರೆರಾಜ್ಯಗಳ ಮಹಾರಾಜರುಗಳು ಸಹ ಭಾಗವಹಿಸಿ 'ಮೈಸೂರು ಅರಸರನ್ನು' ಅಂಬಾರಿಯಲ್ಲಿ ಕಂಡು ಗೌರವವನ್ನು ಸಮರ್ಪಿಸುತ್ತಿದ್ದರೂ. ಮುಂದೆ ರಣಧೀರ ಕಂಠೀರವ ನರಸರಾಜ ಒಡೆಯರು ಸ್ವಯಂ ಜಟ್ಟಿಯಾಗಿದ್ದು ತಿರುಚನಾಪಳ್ಳಿಯ ಪೈಲ್ವಾನ್ನನ್ನು ಮಣ್ಣುಮುಕ್ಕಿಸುತ್ತಾರೆ. ಇವರ ಆಡಳಿತದಲ್ಲಿ ದಸರಾದಲ್ಲಿ ಪ್ರಥಮ ಬಾರಿಗೆ ವಜ್ರಮುಷ್ಟಿ ಕಾಳಗ, ಜಟ್ಟಿ ಕಾಳಗಗಳನ್ನು ಆಚರಣೆಗೆ ತರುತ್ತಾರೆ ಕಾಳಗದಲ್ಲಿ ಗೆದ್ದ ಜಟ್ಟಿಗಳಿಗೆ ಅರಮನೆಯಿಂದ 'ಜಗದೇಕಮಲ್ಲನೆಂಬ' ಬಿರುದು ನೀಡಿ ಗೌರವಿಸುತ್ತಾರೆ. ಇಂದಿಗೂ ಸಹ ಪ್ರತಿವರ್ಷ ಅರಮನೆಯ ಕರಿಕಲ್ಲು ತೊಟ್ಟಿಯಲ್ಲಿ ಜಟ್ಟಿ ಕಾಳಗ ನಡೆಯುವುದನ್ನು ಕಾಣಬಹುದು. ಹೀಗೆ ಬೆಳೆಯು ತ್ತಾ ದಸರಾ ಸುವಿಖ್ಯಾತವಾಗುತ್ತದೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಸರಾ ಮಹೋ ತ್ಸವ ಹೆಚ್ಚು ವೈಭವಪೂರಿತವಾಗಿರುತ್ತದೆ. ತಾಯಿ ಚಾಮುಂಡೇಶ್ವರಿಯ ದಯೆ ಮೈಸೂರು ಅರಸರ ಮೇಲಿರುವುದರಿಂದ ಹೈದರಾಲಿ ಹಾಗೂ ಟಿಪ್ಪು ಸುಲ್ತಾನರ ಕಾಲದಲ್ಲಿಯೂ ಸಹ ದಸರಾ ಮಹೋತ್ಸ ವವನ್ನು ನಿಲ್ಲಿಸಲಾಗಲಿಲ್ಲ ಅಂದಿನ ಕಾಲಘಟ್ಟದ ಲ್ಲಿಯೂ ಸಹ ದಸರಾ ಮಹೋತ್ಸವವು ನಡೆಯುತ್ತದೆ ಆದರೆ ಅದರ ಮೆರಗು ಮೊದಲಿನಂತೆ ಇರುವುದಿಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಒಮ್ಮೆ ದಸರಾ ಸಂದರ್ಭದಲ್ಲಿ 'ಮಿರ್ಜಾ ಇಸ್ಮಾಯಿಲ್' ಅವರನ್ನು ಅಂಬಾರಿಯಲ್ಲಿ ನಾಲ್ವಡಿಯವರು ಜತೆಗೆ ಕೂರಿಸಿಕೊಂಡಾಗ ಪ್ರಜೆಗಳ ವಿರೋಧ ವ್ಯಕ್ತವಾಗುತ್ತದೆ. ಇದನ್ನರಿತ ಮಿರ್ಜಾ ಇಸ್ಮಾಯಿಲ್ ಅಂಬಾರಿಯಿಂದ ಇಳಿದುಬಿಡುತ್ತಾರೆ. ನಾಡಿನ ಜನತೆ 'ಮೈಸೂರು ಮಹಾರಾಜರನ್ನು' ಬಿಟ್ಟು ಬೇರೆ ಯಾವ ವ್ಯಕ್ತಿಯನ್ನು ಅಂಬಾರಿಯಲ್ಲಿ ಕಾಣಲು ಒಪ್ಪುತ್ತಿರಲಿಲ್ಲ, ರಾಜಾ ಪ್ರತ್ಯಕ್ಷ ದೈವ ಎಂಬ ಭಾವನೆಯಿಂದ ಕಾಣುತ್ತಿದ್ದರು. ಅಂಬಾರಿಯಲ್ಲಿ ಮಹಾರಾಜರು ಮಾತ್ರ ಕೂರಬೇಕು ಎಂಬ ನಂಬಿಕೆ ಜನತೆಯಲ್ಲಿ ಮನೆಮಾಡಿತ್ತು. ಅಂಬಾರಿಯಲ್ಲಿ ಕುಳಿತು ಮೆರವಣಿಗೆ ಹೊರಟ ಕೊನೆಯ ಅರಸರೆಂದರೆ ಜಯಚಾಮರಾಜ ಒಡೆಯರು ಅಲ್ಲಿಂದಾಚೆಗೆ ಸರಕಾರಗಳು 'ತಾಯಿ ಚಾಮುಂಡೇಶ್ವರಿಯನ್ನು' ಚಿನ್ನದ ಅಂಬಾರಿಯಲ್ಲಿ ಮೆರವಣಿಗೆ ಮಾಡುತ್ತಾ ಬರುತ್ತಿವೆ. ಅಂಬಾರಿ ಹೊರುವ ಆನೆಗಳಿಗೆ ವಿಶೇಷ ಸ್ಥಾನಮಾನವಿದೆ ಅರಮನೆಯಿಂದ ಮಾವುತರಿಗೆ ಹಾಗೂ ದಸರಾ ಆನೆಗಳಿಗೆ ವಿಶೇಷ ಸೌಲಭ್ಯವನ್ನು ಮೈಸೂರು ರಾಜವಂಶಸ್ಥರು ನೀಡುತ್ತಾ ಬರುತ್ತಿದ್ದಾರೆ. ಇಂದಿನ ಮಹಾರಾಜರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರು ತಮ್ಮ ಪರಿವಾರದೊಂದಿಗೆ ತಾವೇ ಖುದ್ದು ಆನೆಗಳ ಬಿಡಾರಕ್ಕೆ ಭೇಟಿ ನೀಡಿ ಮಾವುತರ ಯೋಗಕ್ಷೇಮ ವಿಚಾರಿಸಿ 'ಸರಳತೆಯ ಮಹಾಮೂರ್ತಿ' ಎನಿಸಿಕೊಂಡಿದ್ದಾರೆ. ತಮ್ಮ ಪೂರ್ವಜರಂತೆ ಅವರು ಸಹ 'ಜನಮಾನಸದ ಮಹಾರಾಜ ರಾಗಿದ್ದಾರೆ' ಇಂದು ಮೈಸೂರು ದಸರಾ ವಿಶ್ವವಿಖ್ಯಾತಿಯನ್ನು ಹೊಂದಿದ್ದು ಪ್ರತಿವರ್ಷ ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಜನರು ದಸರಾ ನೋಡಲು ಮೈಸೂರಿಗೆ ಬರುತ್ತಾರೆ. ಈ ಸಂದರ್ಭದಲ್ಲಿ ಮೈಸೂರು ಸ್ವರ್ಗದಂತೆ ಕಂಗೊಳಿಸುತ್ತಿರುತ್ತದೆ ಇಂತಹ ವೈಭವಪೂರ್ಣವಾದ ದಸರಾವನ್ನು ಕೊಡುಗೆಯಾಗಿ ನೀಡಿದ ಮೈಸೂರು ಅರಸರಿಗೆ ನಾಡಿನ ಜನತೆಯ ಪರವಾಗಿ ಅನಂತ ನಮನಗಳನ್ನು ಅರ್ಪಿಸೋಣ....